## ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
## ಭೂತರಾಮನಹಟ್ಟಿ, ವಿದ್ಯಾಸಂಗಮ, ರಾ. ಹೆ. –04, ಬೆಳಗಾವಿ – 591 156

ಸಂಖ್ಯೆ: ಆರ್‌ಸಿಯು–ಡಿಪಿಎಆರ್/ನೇಮಕಾತಿ/ಹೈ–ಕ/ಇಎಸ್‌ಟಿ/2019–20/2287 ದಿನಾಂಕ: 11–09–2019

## ನೇಮಕಾತಿ ಅಧಿಸೂಚನೆ

**ವಿಷಯ:** ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಬೋಧಕೇತರ ಹುದ್ದೆಗಳನ್ನು ತುಂಬಲು ಅರ್ಹ ಸ್ಥಳೀಯ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸುವ ಕುರಿತು.

**ಉಲ್ಲೇಖ:** 1. ಸರ್ಕಾರಿ ಆದೇಶ ಸಂಖ್ಯೆ: ಸಿ.ಆ.ಸು.ಇ. 08. ಸೆಹಿಮ 95 ದಿನಾಂಕ: 20–06–1995
2. ಸರ್ಕಾರಿ ಆದೇಶ ಸಂಖ್ಯೆ: ಸಿ.ಆ.ಸು.ಇ. 53. ಸೆನೆನಿ 2007, ಬೆಂಗಳೂರು, ದಿನಾಂಕ: 04–01–2008
3. ಸರ್ಕಾರಿ ಆದೇಶ ಸಂಖ್ಯೆ: ಇಡಿ. 106. ಯುಆರ್‌ಸಿ. 2011, ಬೆಂಗಳೂರು, ದಿನಾಂಕ: 12–10–2010
4. ಸರ್ಕಾರಿ ಆದೇಶ ಸಂಖ್ಯೆ: ಇಡಿ. 24. ಯುಆರ್‌ಸಿ. 2010, ಬೆಂಗಳೂರು, ದಿನಾಂಕ: 27–01–2012
5. ಸರ್ಕಾರಿ ಆದೇಶ ಸಂಖ್ಯೆ: ಇಡಿ. 298. ಯುಆರ್‌ಸಿ. 2011, ಬೆಂಗಳೂರು, ದಿನಾಂಕ: 31–05–2012
6. ಅಧಿಕೃತ ಜ್ಞಾಪನಾ ಪತ್ರ ಸಂ: ಸಿಆಸುಇ/33/ಹೈ.ಕ.ಉ/2014, ಬೆಂಗಳೂರು, ದಿನಾಂಕ: 10–04–2014
7. ಈ ಕಛೇರಿ ಅಧಿಸೂಚನೆ ಸಂ: ರಾಚವಿವಿಬೆ/ಕುಸಕಾ/ಡಿಪಿಎಆರ್/2016–17/1637, ದಿನಾಂಕ: 14–07–2016
8. ಸರ್ಕಾರಿ ಆದೇಶ ಸಂಖ್ಯೆ: ಇಡಿ. 35. ಯುಆರ್‌ಸಿ. 2014, ಬೆಂಗಳೂರು, ದಿನಾಂಕ: 22–08–2016
9. ಈ ಕಛೇರಿ ಅಧಿಸೂಚನೆ ಸಂ: ರಾಚವಿ/ಬೆಳಗಾವಿ/ಕುಸಕಾ/2016–17/6766, ದಿನಾಂಕ: 15–03–2017
10. ಸರ್ಕಾರದ ಪತ್ರ ಸಂ: ಇಡಿ/77/ಯುಆರ್‌ಸಿ/2014, ದಿನಾಂಕ: 20–06–2017
11. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 30–06–2017
12. ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯ ಅನುಮೋದನೆ ದಿನಾಂಕ: 07–07–2017
13. ಸರ್ಕಾರದ ಪತ್ರ ಸಂ: ಇಡಿ/136/ಯುಎನ್‌ಇ/2017, ದಿನಾಂಕ: 17–07–2017
14. ಸರ್ಕಾರದ ಪತ್ರ ಸಂ: ಇಡಿ/77/ಯುಆರ್‌ಸಿ/2014, ದಿನಾಂಕ: 25–07–2017
15. ಸರ್ಕಾರದ ಪತ್ರ ಸಂ: ಇಡಿ/572/ಯುಎನ್‌ಇ/2017(ಭಾಗ–1) ದಿನಾಂಕ: 26–09–2017
16. ಸರ್ಕಾರದ ಪತ್ರ ಸಂ: ಇಡಿ/572/ಯುಎನ್‌ಇ/2014, ದಿನಾಂಕ: 27–09–2017
17. ಈ ಕಚೇರಿ ಪತ್ರ ಸಂ: ರಾಚವಿವಿಬೆ/ಕುಸಕಾ/2017–18/3292, ದಿನಾಂಕ: 27–10–2017
18. ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯ ಅನುಮೋದನೆ ದಿನಾಂಕ: 03–11–2017
19. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 23–12–2017
20. ಆರ್‌ಸಿಯು–ಡಿಪಿಎಆರ್/ನೇಮಕಾತಿ/ಹೈ–ಕ/ಇಎಸ್‌ಟಿ/2017–18/4319, ದಿನಾಂಕ: 23–12–2017
21. ಸರ್ಕಾರದ ಆದೇಶ ಸಂ: ಇಡಿ/15/ಯುಆರ್‌ಸಿ/2018, ದಿನಾಂಕ: 12–09–2018
22. ಆರ್‌ಸಿಯು–ಶಿಕ್ಷಕೇತರ/ಇಎಸ್‌ಟಿ/2018–19/4774 ದಿನಾಂಕ: 31–12–2018
23. ಸರ್ಕಾರದ ಆದೇಶ ಸಂ: ಇಡಿ/01/ಯುಆರ್‌ಸಿ/2018, ದಿನಾಂಕ: 16–03–2019
24. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 24–08–2019

***********

ಹೈದ್ರಾಬಾದ್–ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಅರ್ಹ ಅಭ್ಯರ್ಥಿಗಳಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಯಲ್ಲಿ ವಿವಿಧ ಬೋಧಕೇತರ ಹುದ್ದೆಗಳನ್ನು ಉಲ್ಲೇಖ (3, 4 ಮತ್ತು 5) ರ ಸರ್ಕಾರಿ ಆದೇಶಗಳ ಪ್ರಕಾರ ಹಂಚಿಕೆ ಮಾಡಲು ಅನುಮೋದನೆ ಪಡೆಯಲಾಗಿದೆ. ಉಲ್ಲೇಖ (7, 9 12, 13, 14, 15 ಮತ್ತು 16) ರ ಅಧಿಸೂಚನೆ/ತಿದ್ದುಪಡಿ ಅಧಿಸೂಚನೆಯಲ್ಲಿ ವಿವಿಧ ಹುದ್ದೆಗಳನ್ನು ಗುರುತಿಸಿ ನಿಗದಿಪಡಿಸಿದ ಸ್ಥಳೀಯ ವೃಂದ ರಚಿಸಿ ಅಧಿಸೂಚಿಸಲಾಗಿರುತ್ತದೆ. ಅನುಚ್ಛೇದ 371 (ಜೆ) ರಂತೆ ಹೊರಡಿಸಲಾದ ಸಾರ್ವಜನಿಕ ಉದ್ಯೋಗ ಆದೇಶದ ಕಂಡಿಕೆ 13 ಮತ್ತು 15 ರಂತೆ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ವ್ಯಕ್ತಿಗಳಿಂದ ಅರ್ಜಿ ಪಡೆದು ಆಯ್ಕೆ ಅನುಸಾರ ತತ್ಸಂಬಂಧ ವೃಂದಗಳಲ್ಲಿ ಹಂಚಿಕೆ ಮಾಡಿ, ತರುವಾಯ ಲಭ್ಯವಿರುವ ವಿವಿಧ ವೃಂದದವರಿಂದ ಸ್ಥಳೀಯ ವೃಂದದ ಈ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ **08** (ಎಂಟು) ಪ್ರತಿಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಅವಶ್ಯ ದಾಖಲೆಗಳೊಂದಿಗೆ **ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ ಬೆಳಗಾವಿ–591156, ಕರ್ನಾಟಕ** ಇವರಿಗೆ **ದಿನಾಂಕ: 12–10–2019** ರಂದು **ಸಂಜೆ 5.00** ಗಂಟೆಯ ಒಳಗಾಗಿ ರಿಜಿಸ್ಟರ್ಡ್ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸುವಂತೆ ಸೂಚಿಸಲಾಗಿದೆ.

**ಸ್ಥಳೀಯ ವೃದದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳ ವಿವರ:**

| ಕ್ರ.ಸಂ. | ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | ರೋಸ್ಟರ್ ಪ್ರಕಾರ ಹುದ್ದೆಗಳ ವರ್ಗೀಕರಣ |
|---|---|---|---|
| 01 | **ಉಪ ಕುಲಸಚಿವರು**<br>67550-1650-72500-1900-83900-2200-97100-2500-104600 | 01 | ಮೀಸಲು ರಹಿತ |
| 02 | **ವೈದ್ಯಾಧಿಕಾರಿಗಳು**<br>67550-1650-72500-1900-83900-2200-97100-2500-104600 | 01 | ಮೀಸಲು ರಹಿತ |
| 03 | **ಸಹಾಯಕ ಕುಲಸಚಿವರು**<br>52650-1250-53900-1450-62600-1650-72500-1900-83900-2200-97100 | 01 | ಮೀಸಲು ರಹಿತ |
| 04 | **ಸಿಸ್ಟಮ್ ಅಸಿಸ್ಟಂಟ್**<br>52650-1250-53900-1450-62600-1650-72500-1900-83900-2200-97100 | 01 | ಮೀಸಲು ರಹಿತ |
| 05 | **ಎಸ್ಟೇಟ್ ಆಫೀಸರ್**<br>43100-1100-46400-1250-53900-1450-62600-1650-72500-1900-83900 | 01 | ಮೀಸಲು ರಹಿತ |
| 06 | **ಕಛೇರಿ ಅಧೀಕ್ಷಕರು**<br>43100-1100-46400-1250-53900-1450-62600-1650-72500-1900-83900 | 01 | ಮೀಸಲು ರಹಿತ |
| 07 | **ನರ್ಸ್**<br>40900-1100-46400-1250-53900-1450-62600-1650-72500-1900-78200 | 01 | ಮೀಸಲು ರಹಿತ |
| 08 | **ಕಂಪೌಂಡರ್ಸ್**<br>33450-850-36000-950-39800-1100-46400-1250-53900-1450-62600 | 01 | ಮೀಸಲು ರಹಿತ |
| 09 | **ಫೀಲ್ಡ್ ಕೋಚಿಸ್‌ಗಳು**<br>33450-850-36000-950-39800-1100-46400-1250-53900-1450-62600 | 01 | ಮೀಸಲು ರಹಿತ |
| 10 | **"ಡಿ" ದರ್ಜೆ ನೌಕರರು**<br>17000-400-18600-450-20400-500-22400-550-24600-600-27000-650-28950 | 06 | 01–ಪ.ಜಾ. 01–ಸಾ.ಅ., 01–ಪ.ಪಂ. 01–ಸಾ.ಅ (ಮಹಿಳೆ), 01– ಸಿ–1, 01–ಸಾ.ಅ (ಗ್ರಾಮೀಣ) |

- **ಪ.ಜಾ– ಪರಿಶಿಷ್ಟ ಜಾತಿ, ಸಾ.ಅ.– ಸಾಮಾನ್ಯ ಅಭ್ಯರ್ಥಿ, ಪ.ಪಂ.– ಪರಿಶಿಷ್ಟ ಪಂಗಡ, ಸಿ–1– ಪ್ರವರ್ಗ–I,**

**ವಿದ್ಯಾರ್ಹತೆ:**

*** ಸಾಮಾನ್ಯ ನಿಯಮ: ಈ ಎಲ್ಲ ಹುದ್ದೆಗಳಿಗೆ ನೇಮಕ ಬಯಸುವವರು ಕನ್ನಡ ಭಾಷೆಯ ಸಾಮಾನ್ಯ ಜ್ಞಾನವನ್ನು ಹೊಂದಿರಬೇಕು.**

1. **ಉಪಕುಲಸಚಿವರು:**

    1. ಅಂಗೀಕೃತ ವಿಶ್ವವಿದ್ಯಾಲಯದಿಂದ ಕನಿಷ್ಠ ದ್ವಿತೀಯ ದರ್ಜೆ ಶ್ರೇಣಿಯಲ್ಲಿ ಪ್ರತಿಶತ ಶೇ. 55% (ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳಿಗೆ 5% ರಿಯಾಯತಿ) ದೊಂದಿಗೆ ಸ್ನಾತಕೋತ್ತರ ಪದವಿಯನ್ನು ಉತ್ತೀರ್ಣರಾಗಿರತಕ್ಕದ್ದು. ಸರ್ಕಾರಿ ಕಛೇರಿ /ಶಿಕ್ಷಣ ಸಂಸ್ಥೆಯಲ್ಲಿ ಕನಿಷ್ಠ 10 ವರ್ಷಗಳ ಆಡಳಿತಾತ್ಮಕ ಅನುಭವವನ್ನು ಪಡೆದಿರಬೇಕು.

    **ಅಥವಾ**

    ಅಂಗೀಕೃತ ವಿಶ್ವವಿದ್ಯಾಲಯದಿಂದ ಕನಿಷ್ಠ ದ್ವಿತೀಯ ದರ್ಜೆ ಶ್ರೇಣಿಯಲ್ಲಿ ಪ್ರತಿಶತ ಶೇ. 55% (ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳಿಗೆ 5% ರಿಯಾಯತಿ) ದೊಂದಿಗೆ ಸ್ನಾತಕೋತ್ತರ ಪದವಿಯನ್ನು ಉತ್ತೀರ್ಣರಾಗಿರತಕ್ಕದ್ದು. ಯಾವುದೇ ಅಂಗೀಕೃತ ವಿಶ್ವವಿದ್ಯಾಲಯ/ಘಟಕ ಮಹಾವಿದ್ಯಾಲಯ/ಅನುದಾನಿತ ಮಹಾವಿದ್ಯಾಲಯಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕನಿಷ್ಠ 10 ವರ್ಷಗಳ ಸೇವೆಯನ್ನು ಸಲ್ಲಿಸಿದವರಾಗಿರಬೇಕು.

2. ಕರ್ನಾಟಕ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಇತರೆ ನಿಯಮಗಳು ಅನ್ವಯವಾಗುತ್ತವೆ.

2. **ವೈದ್ಯಾಧಿಕಾರಿಗಳು :**

1. ಅಂಗೀಕೃತ ವಿಶ್ವವಿದ್ಯಾಲಯದಿಂದ ಎಂ.ಬಿ.ಬಿ.ಎಸ್. ಪದವಿಯನ್ನು ಪಡೆದಿರತಕ್ಕದ್ದು.
2. ಉನ್ನತ ವ್ಯಾಸಂಗ ಹೊಂದಿದವರಿಗೆ ಆದ್ಯತೆಯನ್ನು ನೀಡಲಾಗುವುದು.
3. ಸರ್ಕಾರಿ ಅಥವಾ ಹೆಸರಾಂತ ಖಾಸಗಿ ಆಸ್ಪತ್ರೆಯಲ್ಲಿ ವೈದ್ಯರಾಗಿ/ವೈದ್ಯಾಧಿಕಾರಿಯಾಗಿ ಕನಿಷ್ಠ 05 ವರ್ಷಗಳ ಅನುಭವ ಹೊಂದಿರತಕ್ಕದ್ದು.
4. ಕರ್ನಾಟಕ ಸರ್ಕಾರವು ನಿಗದಿಪಡಿಸಿದ ವಯೋಮಿತಿಯಲ್ಲಿರಬೇಕು
5. ಕರ್ನಾಟಕ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಇತರೆ ನಿಯಮಗಳು ಅನ್ವಯವಾಗುತ್ತವೆ.

3. **ಸಹಾಯಕ ಕುಲಸಚಿವರು:**

1. ಅಂಗೀಕೃತ ವಿಶ್ವವಿದ್ಯಾಲಯದಿಂದ ಕನಿಷ್ಠ ದ್ವಿತೀಯ ದರ್ಜೆ ಶ್ರೇಣಿಯಲ್ಲಿ ಪ್ರತಿಶತ ಶೇ. 55% (ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳಿಗೆ 5% ರಿಯಾಯತಿ) ದೊಂದಿಗೆ ಸ್ನಾತಕೋತ್ತರ ಪದವಿಯನ್ನು ಉತ್ತೀರ್ಣರಾಗಿರತಕ್ಕದ್ದು ಸರ್ಕಾರಿ ಕಛೇರಿ /ಶಿಕ್ಷಣ ಸಂಸ್ಥೆಯಲ್ಲಿ ಕನಿಷ್ಠ 05 ವರ್ಷಗಳ ಆಡಳಿತಾತ್ಮಕ ಅನುಭವವನ್ನು ಪಡೆದಿರಬೇಕು.
2. ಸಾಮಾನ್ಯ ಕಂಪ್ಯೂಟರ್ ಜ್ಞಾನವನ್ನು ಹೊಂದಿರಬೇಕು.
3. ಕರ್ನಾಟಕ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಇತರೆ ನಿಯಮಗಳು ಅನ್ವಯವಾಗುತ್ತವೆ.

4. **ಸಿಸ್ಟಮ್ ಅಸಿಸ್ಟಂಟ್:**

1. ಬಿ.ಇ./ಬಿ.ಟೆಕ್‌ನಲ್ಲಿ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನೀಯರಿಂಗ್/ ಇನ್ಫಾರ್ಮೇಶನ್ ಸೈನ್ಸ್/ಇನ್ಫಾರ್ಮೇಶನ್ ಟೆಕ್ನಾಲಾಜಿ ವಿಷಯದಲ್ಲಿ ಕನಿಷ್ಠ ದ್ವಿತೀಯ ದರ್ಜೆ ಶ್ರೇಣಿಯಲ್ಲಿ ಪ್ರತಿಶತ ಶೇ. 55% (ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳಿಗೆ 5% ರಿಯಾಯತಿ) ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು. ಸಾಫ್ಟ್‌ವೇರ್/ಹಾರ್ಡ್‌ವೇರ್ ಪ್ರೊಗ್ರಾಮ್ಸ್‌ಗೆ ಸಂಬಂಧಿಸಿದಂತೆ ಉತ್ತಮ ಜ್ಞಾನ ಹೊಂದಿರಬೇಕು

   **ಅಥವಾ**

   ಎಂ.ಎಸ್ಸಿ. (ಕಂಪ್ಯೂಟರ್ ಸೈನ್ಸ್)/ಎಂ.ಸಿ.ಎ. ಸ್ನಾತಕೋತ್ತರ ಪದವಿಯನ್ನು ಕನಿಷ್ಠ ದ್ವಿತೀಯ ದರ್ಜೆ ಶ್ರೇಣಿಯಲ್ಲಿ ಪ್ರತಿಶತ ಶೇ. 55% (ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳಿಗೆ 5% ರಿಯಾಯತಿ) ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು. ಸಾಫ್ಟ್‌ವೇರ್/ಹಾರ್ಡ್‌ವೇರ್ ಪ್ರೊಗ್ರಾಮ್ಸ್‌ಗೆ ಸಂಬಂಧಿಸಿದಂತೆ ಉತ್ತಮ ಜ್ಞಾನ ಹೊಂದಿರಬೇಕು.

2. ಕರ್ನಾಟಕ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಇತರೆ ನಿಯಮಗಳು ಅನ್ವಯವಾಗುತ್ತವೆ.

5. **ಎಸ್ಟೇಟ್ ಆಫೀಸರ್:**

1. ಅಂಗೀಕೃತ ವಿಶ್ವವಿದ್ಯಾಲಯದಿಂದ ಸಿವಿಲ್ ಇಂಜಿನೀಯರಿಂಗ್ ಸ್ನಾತಕ ಪದವಿಯಲ್ಲಿ ಕನಿಷ್ಠ ದ್ವಿತೀಯ ದರ್ಜೆ ಶ್ರೇಣಿಯಲ್ಲಿ ಪ್ರತಿಶತ ಶೇ. 55% (ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳಿಗೆ 5% ರಿಯಾಯತಿ) ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು.
2. ಕನಿಷ್ಠ 08 ವರ್ಷಗಳ ಸಮಾನಾಂತರ ಹುದ್ದೆಯಲ್ಲಿ (ಖಾಸಗಿ ಅಥವಾ ಸರ್ಕಾರಿ ವಲಯದಲ್ಲಿ) ಸೇವಾ ಅನುಭವವನ್ನು ಪಡೆದಿರಬೇಕು.
3. ಕರ್ನಾಟಕ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಇತರೆ ನಿಯಮಗಳು ಅನ್ವಯವಾಗುತ್ತವೆ.

6. **ಕಛೇರಿ ಅಧೀಕ್ಷಕರು:**

1. ಅಂಗೀಕೃತ ವಿಶ್ವವಿದ್ಯಾಲಯದಿಂದ ಸ್ನಾತಕ ಪದವಿಯಲ್ಲಿ ಕನಿಷ್ಠ ದ್ವಿತೀಯ ದರ್ಜೆ ಶ್ರೇಣಿಯಲ್ಲಿ ಪ್ರತಿಶತ ಶೇ. 55% (ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳಿಗೆ 5% ರಿಯಾಯತಿ) ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು.
2. ಸರ್ಕಾರಿ ಅಥವಾ ಶೈಕ್ಷಣಿಕ ಸಂಸ್ಥೆಯಲ್ಲಿ ಕನಿಷ್ಠ 03 ವರ್ಷ ಕಡಿಮೆ ಇಲ್ಲದಂತೆ ಕಛೇರಿ ಮೇಲ್ವಿಚಾರಣಾ ಸೇವಾ ಅನುಭವವನ್ನು ಹೊಂದಿರಬೇಕು.
3. ಕರ್ನಾಟಕ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಇತರೆ ನಿಯಮಗಳು ಅನ್ವಯವಾಗುತ್ತವೆ.

**7. ನರ್ಸ್:**

1. ಅಂಗೀಕೃತ ಸಂಸ್ಥೆಯಿಂದ ಮೂರು ವರ್ಷದ ಡಿಪ್ಲೋಮಾ ಇನ್ ನರ್ಸಿಂಗ್ ಕೋರ್ಸನ್ನು ಕನಿಷ್ಠ ದ್ವಿತೀಯ ದರ್ಜೆ ಶ್ರೇಣಿಯಲ್ಲಿ ಪ್ರತಿಶತ ಶೇ. 55% (ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳಿಗೆ 5% ರಿಯಾಯತಿ) ಅಂಕದೊಂದಿಗೆ ತೇರ್ಗಡೆ ಹೊಂದಿರಬೇಕು.

**ಅಥವಾ**

ಬಿ.ಎಸ್ಸಿ. (ನರ್ಸಿಂಗ್) ನ್ನು ಅಂಗೀಕೃತ ವಿಶ್ವವಿದ್ಯಾಲಯ/ಸಂಸ್ಥೆಯಿಂದ ಕನಿಷ್ಠ ದ್ವಿತೀಯ ದರ್ಜೆ ಶ್ರೇಣಿಯಲ್ಲಿ ಪ್ರತಿಶತ ಶೇ. 55% (ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳಿಗೆ 5% ರಿಯಾಯತಿ) ಅಂಕದೊಂದಿಗೆ ತೇರ್ಗಡೆ ಹೊಂದಿರಬೇಕು.

2. ಅಧಿಕೃತ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಸಂಸ್ಥೆಯಿಂದ ನರ್ಸ್ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದ ಪ್ರಮಾಣ ಪತ್ರವನ್ನು ಪಡೆದಿರಬೇಕು.
3. ಕೇಂದ್ರ/ರಾಜ್ಯದ ನರ್ಸಿಂಗ್ ಕೌನ್ಸಿಲ್‌ನಲ್ಲಿ ನೊಂದಣಿಯನ್ನು ಹೊಂದಿರಬೇಕು.
4. ಆಸ್ಪತ್ರೆ/ಕ್ಲಿನಿಕ್‌ನಲ್ಲಿ ಕನಿಷ್ಠ 02 ವರ್ಷಗಳ ಪ್ರಾಯೋಗಿಕ ಸೇವಾ ಅನುಭವವನ್ನು ಹೊಂದಿರಬೇಕು.
5. ಕರ್ನಾಟಕ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಇತರೆ ನಿಯಮಗಳು ಅನ್ವಯವಾಗುತ್ತವೆ.

**8. ಕಂಪೌಂಡರ್ಸ್:**

1. ಡಿಪ್ಲೋಮಾ ಇನ್ ಫಾರ್ಮಸಿ ಅಥವಾ ಬಿ.ಎಸ್ಸಿ (ಮೈಕ್ರೋಬಯಾಲಜಿ) ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್‌ನಿಕ್ಸ್ ವಿಷಯದಲ್ಲಿ ಪಾಸಾಗಿರುವ ಕುರಿತು ಅಂಗೀಕೃತ ಸಂಸ್ಥೆಯಿಂದ ಪ್ರಮಾಣಪತ್ರವನ್ನು ಪಡೆದಿರಬೇಕು.
2. ಕರ್ನಾಟಕ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಇತರೆ ನಿಯಮಗಳು ಅನ್ವಯವಾಗುತ್ತವೆ.

**09. ಫೀಲ್ಡ್ ಕೋಚಿಸ್:**

1. ದೈಹಿಕ ಶಿಕ್ಷಣದಲ್ಲಿ ಸ್ನಾತಕ (ಬಿ.ಪಿ.ಇಡಿ) ಪದವಿಯನ್ನು ಕನಿಷ್ಠ ದ್ವಿತೀಯ ದರ್ಜೆ ಶ್ರೇಣಿಯಲ್ಲಿ ಪ್ರತಿಶತ ಶೇ. 55% (ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳಿಗೆ 5% ರಿಯಾಯತಿ) ಅಂಕಗಳೊಂದಿಗೆ ಉತ್ತೀರ್ಣರಾಗಿರತಕ್ಕದ್ದು.
2. ಯೋಗಾಸನ ಕಲಿಕೆಯಲ್ಲಿ ಅನುಭವವನ್ನು ಹೊಂದಿರಬೇಕು.
3. ಅಥ್ಲೆಟಿಕ್ಸ್/ವ್ಹಾಲಿಬಾಲ್/ಕಬಡ್ಡಿ ವಿಭಾಗಗಳಲ್ಲಿ ಪರಿಣತಿ ಪಡೆದಿರಬೇಕು (ವಿಶ್ವವಿದ್ಯಾಲಯದ ಬೇಡಿಕೆಗೆ ಅನುಸಾರವಾಗಿ ಹುದ್ದೆಯನ್ನು ತುಂಬಲಾಗುವುದು)
4. ವಿಶ್ವವಿದ್ಯಾಲಯ ಅಥವಾ ರಾಜ್ಯ ಮಟ್ಟದಲ್ಲಿ ಮೇಲೆ ತಿಳಿಸಿದ ಕ್ರೀಡಾ ವಿಭಾಗಗಳಲ್ಲಿ ಭಾಗವಹಿಸಿ ವಿಜೇತರಾಗಿರುವ ಬಗ್ಗೆ ಪ್ರಮಾಣಪತ್ರ ಹೊಂದಿರಬೇಕು.
5. ಎನ್.ಐ.ಎಸ್. ತರಬೇತಿಯಲ್ಲಿ ನಿರ್ದಿಷ್ಟ ಪಡಿಸಿದ ಕ್ರೀಡಾ ಅನುಭವವನ್ನು ಅವಶ್ಯಕವಾಗಿ ಹೊಂದಿರಬೇಕು. ಆ ಬಗ್ಗೆ ಪುರಾವೆಯನ್ನು ಒದಗಿಸಬೇಕು.
6. ಕರ್ನಾಟಕ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಇತರೆ ನಿಯಮಗಳು ಅನ್ವಯವಾಗುತ್ತವೆ.

**10. ಗ್ರೂಫ್–ಡಿ ಹುದ್ದೆಗಳು:**

1. 10ನೇ ತರಗತಿ ಅಥವಾ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
2. ಕರ್ನಾಟಕ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಇತರೆ ನಿಯಮಗಳು ಅನ್ವಯವಾಗುತ್ತವೆ.

**ವಯೋಮಿತಿ: (ಮೇಲ್ಕಾಣಿಸಿದ ಎಲ್ಲ ಬೋಧಕೇತರ ಹುದ್ದೆಗಳಿಗೆ)**

**ಪ.ಜಾ./ಪ.ಪಂ./ಪ್ರವರ್ಗ–I** – ಕನಿಷ್ಠ – 18 ವರ್ಷ ಗರಿಷ್ಠ – 40 ವರ್ಷಗಳು

**ಪ್ರವರ್ಗ– II(a), II(b), III(a), III(b)** – ಕನಿಷ್ಠ – 18 ವರ್ಷ ಗರಿಷ್ಠ – 38 ವರ್ಷಗಳು

**ಸಾಮಾನ್ಯ ವರ್ಗ** – ಕನಿಷ್ಠ – 18 ವರ್ಷ ಗರಿಷ್ಠ – 35 ವರ್ಷಗಳು

ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ, ಅವನು ಸಶಸ್ತ್ರ ಕೇಂದ್ರದಳದಲ್ಲಿ ಕನಿಷ್ಠ ಮೂರು ವರ್ಷ ಸೇವೆ ಸಲ್ಲಿಸಿರಬೇಕು ಅಂಥವರಿಗೆ ಸೇವಾವಧಿಯ ಆಧಾರದ ಮೇಲೆ ಅವರ ಸೇವಾವಧಿಯೊಂದಿಗೆ ಮೂರು ವರ್ಷಗಳ ವಯೋಮಿತಿ ಸಡಿಲಿಕೆಗೆ ಅವಕಾಶವಿರುತ್ತದೆ. (ಗರಿಷ್ಠ 45 ವರ್ಷ ವಯೋಮಿತಿ).

**ಅರ್ಜಿ ಶುಲ್ಕ:** ರೂ. 1,000/– –(ಪ.ಜಾ./ಪ.ಪಂ./ಪ್ರ.ವರ್ಗ–1– ರೂ. 500/–)

- ಅಂಗವಿಕಲ ಮತ್ತು ದೃಷ್ಟಿಮಾಂದ್ಯ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಲ್ಲಿ ಪೂರ್ಣ ವಿನಾಯತಿ ಇರುತ್ತದೆ. (ಅಧಿಕೃತ ಪ್ರಮಾಣಪತ್ರದ ಪ್ರತಿಗಳನ್ನು ಪೂರೈಸಬೇಕು)
- ವಿವರವಾದ ಅಧಿಸೂಚನೆ ವಿವರಗಳನ್ನು ಹಾಗೂ ನಿಗದಿತ ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.rcub.ac.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
- ನಿಗದಿತ ಅರ್ಜಿ ಶುಲ್ಕವನ್ನು ಡಿ.ಡಿ. ಮೂಲಕ **ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ–591156** ಇವರ ಹೆಸರಿಗೆ ಪಾವತಿಸಿ, ಡಿ.ಡಿ. ಯನ್ನು ಅರ್ಜಿಯ ಜೊತೆಗೆ ಲಗತ್ತಿಸಬೇಕು. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ಒಳಗಾಗಿ ಅರ್ಜಿಗಳನ್ನು ಕಳುಹಿಸಿ ಕೊಡುವುದು.

**ಸಾಮಾನ್ಯ ಸೂಚನೆಗಳು:**

1. ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್–ಕರ್ನಾಟಕ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) 2013 ರನ್ವಯ ನೇಮಕಾತಿಯಲ್ಲಿ ಸ್ಥಳೀಯ ಅಭ್ಯರ್ಥಿಯೆಂದು ಮೀಸಲಾತಿಯನ್ನು ಕ್ಲೇಮ್ ಮಾಡುವ ವ್ಯಕ್ತಿಯು ಸಕ್ಷಮ ಪ್ರಾಧಿಕಾರವು ನೀಡುವ ನಿಗದಿತ ಅರ್ಹತಾ ಪ್ರಮಾಣ ಪತ್ರವನ್ನು ಪಡೆದುಕೊಂಡಿರತಕ್ಕದ್ದು ಹಾಗೂ ದೃಢೀಕೃತ ಪ್ರತಿಯನ್ನು ಲಗತ್ತಿಸುವುದು.
2. ಮೀಸಲಾತಿಯ ಸೌಲಭ್ಯವನ್ನು ಪಡೆದುಕೊಳ್ಳುವ ಅಭ್ಯರ್ಥಿಗಳು ತಮ್ಮ ಜಾತಿ ಪ್ರಮಾಣಪತ್ರಗಳನ್ನು ತಹಶೀಲ್ದಾರರು ಅಥವಾ ತತ್ಸಮಾನ ಸಕ್ಷಮ ಪ್ರಾಧಿಕಾರಕ್ಕೆ ಕಡಿಮೆ ಇಲ್ಲದ ಅಧಿಕಾರಿಗಳಿಂದ ಸದರಿ ನೇಮಕಾತಿ ಅಧಿಸೂಚನೆ ಪ್ರಕಟವಾದ ದಿನಾಂಕದಿಂದ ಒಂದು ವರ್ಷದೊಳಗಿನ ಪ್ರಮಾಣಪತ್ರಗಳನ್ನು ಪಡೆದುಕೊಂಡಿರತಕ್ಕದ್ದು ಹಾಗೂ ಜಾತಿ ಪ್ರಮಾಣಪತ್ರದ ದೃಢೀಕೃತ ಪ್ರತಿಯನ್ನು ಲಗತ್ತಿಸುವುದು.
3. ಹೆಚ್ಚಿನ ವಿವರವಾದ ಮಾಹಿತಿ ಹಾಗೂ ನೇಮಕಾತಿ ಅರ್ಜಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.rcub.ac.in ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ನಿಗದಿತ ಶುಲ್ಕದೊಂದಿಗೆ ಸಲ್ಲಿಸುವುದು.
4. ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವುದು.
5. ಸಂದರ್ಶನಕ್ಕೆ ಹಾಜರಾಗುವ ಅಥವಾ ನೇಮಕಾತಿಯ ನಂತರ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಸಂದರ್ಭದಲ್ಲಿ ದಿನಭತ್ಯೆ/ಪ್ರಯಾಣಭತ್ಯೆಯನ್ನು ವಿಶ್ವವಿದ್ಯಾಲಯವು ಭರಿಸುವುದಿಲ್ಲ.
6. ಆಯ್ಕೆಯಾದ ಅಭ್ಯರ್ಥಿಗಳು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟ ಯಾವದೇ ಸ್ನಾತಕೋತ್ತರ ಕೇಂದ್ರ/ಘಟಕ ಕಾಲೇಜುಗಳಲ್ಲಿ ಸೇವೆ ಸಲ್ಲಿಸಲು ಸಿದ್ಧರಿರಬೇಕು.
7. ಅರ್ಜಿಯಲ್ಲಿ ನೀಡಿರುವ ವಿಳಾಸವು ಅಂತಿಮವಾಗಿದ್ದು, ನಂತರ ವಿಳಾಸ ಬದಲಾವಣೆಗೆ ಯಾವದೇ ಪತ್ರ ವ್ಯವಹಾರಗಳಿಗೆ ಆಸ್ಪದವಿರುವುದಿಲ್ಲ.
8. ಸೇವೆಯಲ್ಲಿರುವ (In-Service) ಅಭ್ಯರ್ಥಿಗಳು ಸೇವಾ ಪ್ರಾಧಿಕಾರದ ಮುಖಾಂತರ ಅರ್ಜಿ ತಲುಪಬೇಕಾದ ಕೊನೆಯ ದಿನಾಂಕದೊಳಗೆ ಅರ್ಜಿಯನ್ನು ಸಲ್ಲಿಸುವುದು.
9. ಕರ್ನಾಟಕ ರಾಜ್ಯದ ಹೈದ್ರಾಬಾದ– ಕರ್ನಾಟಕ ಪ್ರದೇಶದ ಅಭ್ಯರ್ಥಿಗಳು ಮಾತ್ರ ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
10. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾಗಿರುವ ಹುದ್ದೆಗಳಿಗೆ ಬೇರೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
11. ಅಭ್ಯರ್ಥಿಗಳು ತಮ್ಮ ಅರ್ಜಿಗಳೊಂದಿಗೆ ಎಂಟು ಪ್ರತಿಗಳಲ್ಲಿ ಲಗತ್ತಿಸಿರುವ ಅರ್ಹತಾ ಪ್ರಮಾಣ ಪತ್ರ/ಜಾತಿ ಪ್ರಮಾಣಪತ್ರ/ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ/ಕನ್ನಡ ಮಾಧ್ಯಮ ಪ್ರಮಾಣಪತ್ರ/ಅಂಕಗಳ ಪಟ್ಟಿ/ಸೇವಾ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಲಗತ್ತಿಸಬೇಕು. ಅವುಗಳನ್ನು ಹಿಂದಿರುಗಿಸಲಾಗುವುದಿಲ್ಲ.
12. ಅರ್ಜಿ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ.
13. ನಿಗದಿಪಡಿಸಿದ ದಿನಾಂಕದ ನಂತರ ತಲುಪಿದ, ಅಪೂರ್ಣವಾಗಿರುವ ಮತ್ತು ನಿಗದಿತ ನಮೂನೆಯಲ್ಲಿರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಈ ವಿಷಯದಲ್ಲಿ ಮುಂದಿನ ಪತ್ರ ವ್ಯವಹಾರಗಳಿಗೆ ಆಸ್ಪದವಿರುವುದಿಲ್ಲ.

14. ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಪ್ರಭಾವ ಬೀರುವ ಅಭ್ಯರ್ಥಿಯ ಅಭ್ಯರ್ಥಿತನವನ್ನು ಅನರ್ಹಗೊಳಿಸಲಾಗುತ್ತದೆ.
15. ಈ ಅಧಿಸೂಚನೆಯಲ್ಲಿ ಪ್ರಕಟಿಸಿದ ಯಾವುದೇ ಹುದ್ದೆಗಳನ್ನು ತುಂಬುವ ಇಲ್ಲವೇ ತುಂಬದಿರುವ ಅಧಿಕಾರವು ವಿಶ್ವವಿದ್ಯಾಲಯಕ್ಕೆ ಸೇರಿದೆ.
16. ಆಯ್ಕೆಯಾದ ಅಭ್ಯರ್ಥಿಗಳು ಸರ್ಕಾರದ ಆದೇಶ ಸಂಖ್ಯೆ. ಎಫ್‌ಡಿ(ಎಸ್‌ಪಿಎಲ್)04 ಪಿಇಟಿ 2005, ಬೆಂಗಳೂರು, ಇದರ ಪ್ರಕಾರ ದಿನಾಂಕ: 30–03–2006 ರ ಹೊಸ ವಿಶ್ರಾಂತ ವೇತನ ಯೋಜನೆ (New Pension Scheme) ಯ ಹಾಗೂ ಈ ಬಗ್ಗೆ ಸರಕಾರವು ಕಾಲಕಾಲಕ್ಕೆ ಹೊರಡಿಸಿರುವ ಇತರೆ ಯಾವುದೇ ಆದೇಶಗಳ ಷರತ್ತುಗಳಿಗೆ (ಆಡಳಿತಕ್ಕೆ) ಒಳಪಟ್ಟಿರುತ್ತಾರೆ.
17. ಆಯ್ಕೆಯಾದ ಅಭ್ಯರ್ಥಿಗಳು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು– 1977 ರ ಹಾಗೂ ಈ ಕುರಿತು ಕಾಲಕಾಲಕ್ಕೆ ಹೊರಡಿಸಿರುವ ನಿಯಮಗಳಿಗೆ ಒಳಪಟ್ಟಿರುತ್ತಾರೆ.
18. ಕರ್ನಾಟಕ ಸರ್ಕಾರ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ: ಇಡಿ/572/ಯುಎನ್‌ಇ/2014, ಬೆಂಗಳೂರು, ದಿನಾಂಕ: 27–09–2017 ರಲ್ಲಿರುವ ಷರತ್ತು ಮತ್ತು ನಿಬಂಧನೆಗಳು ಹಾಗೂ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ ಮತ್ತು ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ ಸದರಿ ನೇಮಕಾತಿಯನ್ನು ಮಾಡಲಾಗುವುದು.
19. ಸದರಿ ನೇಮಕಾತಿಗಳ ಕುರಿತು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಜಾಲತಾಣ (ವೆಬ್‌ಸೈಟ್– www.rcub.ac.in) ದಲ್ಲಿ ಕಾಲಕಾಲಕ್ಕೆ ಹೊರಡಿಸುವ ಅಧಿಸೂಚನೆ/ಸುತ್ತೋಲೆ/ಪತ್ರಗಳನ್ನು ಅಭ್ಯರ್ಥಿಗಳು ಗಮನಿಸತಕ್ಕದ್ದು.

**ಆದೇಶದ ಮೇರೆಗೆ**
**ಸಹಿ/–**
**ಕುಲಸಚಿವರು**

**ಇವರಿಗೆ,**

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು–560 001
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
3. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ, ಸಂ. 39, ಯುನೈಟೆಡ್ ಮೆನ್ಷನ್, 3ನೇ ಮಹಡಿ, ಎಂ.ಜಿ. ರಸ್ತೆ, ಬೆಂಗಳೂರು–1
5. ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರಿಗೆ – ಪ್ರಕಟಣೆಯನ್ನು ಉಚಿತವಾಗಿ ಪ್ರಕಟಿಸುವಂತೆ ಕೋರಿ.
6. ನಿಲಯ ನಿರ್ದೇಶಕರು, ಆಕಾಶವಾಣಿ ಕೇಂದ್ರ, ಧಾರವಾಡ/ ಬೆಂಗಳೂರು/ ಮಂಗಳೂರು/ ಭದ್ರಾವತಿ/ ಮೈಸೂರು/ಮಡಿಕೇರಿ/ಗುಲ್ಬರ್ಗಾ – ಪ್ರಕಟಣೆಯನ್ನು ಉಚಿತವಾಗಿ ಪ್ರಕಟಿಸುವಂತೆ ಕೋರಿ.
7. ನಿರ್ದೇಶಕರು, ದೂರದರ್ಶನ ಕೇಂದ್ರ, ದೂರದರ್ಶನ ಭವನ, ಜೆ.ಸಿ. ನಗರ, ಬೆಂಗಳೂರು, ಪ್ರಕಟಣೆಯನ್ನು ಉಚಿತವಾಗಿ ಪ್ರಕಟಿಸುವಂತೆ ಕೋರಿ.
8. ಕುಲಸಚಿವರು (ಮೌಲ್ಯಮಾಪನ)/ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ
9. ಗ್ರಂಥಪಾಲಕರು, ವಿಶ್ವವಿದ್ಯಾಲಯದ ಗ್ರಂಥಾಲಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಸೂಚನಾ ಫಲಕದಲ್ಲಿ ಪ್ರಕಟಿಸುವ ಸಲುವಾಗಿ
10. ಎಲ್ಲಾ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ ಸೂಚನಾ ಫಲಕದಲ್ಲಿ ಪ್ರಕಟಿಸುವ ಸಲುವಾಗಿ
11. ಜಿಲ್ಲಾ ವಾರ್ತಾ ಅಧಿಕಾರಿ, ಬೆಳಗಾವಿ/ವಿಜಯಪುರ/ಬಾಗಲಕೋಟ– ಪ್ರಕಟಣೆಯನ್ನು ಉಚಿತವಾಗಿ ಪ್ರಕಟಿಸುವ ಸಲುವಾಗಿ.
12. ಸಹ ನಿರ್ದೇಶಕರು, ಪರಿಶಿಷ್ಟ ಜಾತಿ/ಪಂಗಡದ ರಾಜ್ಯ ವಿಶೇಷ ಉದ್ಯೋಗ ವಿನಿಮಯ, ನಂ. 135, ಬ್ರಿಗೇಡ್ ರಸ್ತೆ, ಬೆಂಗಳೂರು– 560 025
13. ಕರ್ನಾಟಕ ರಾಜ್ಯ ದಲಿತ ವರ್ಗಗಳ ಒಕ್ಕೂಟ, ಬಾಪೂಜಿ ವಿದ್ಯಾರ್ಥಿ ನಿಲಯ, ಆದಿಜಾಂಬವ ಹೊಟೇಲ್, ಮಾಗಡಿ ರಸ್ತೆ ಬೆಂಗಳೂರು–560 023
14. ನಿರ್ದೇಶಕರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ವಿಜಯಪುರ/ಬಾಗಲಕೋಟ/ಜಮಖಂಡಿ ಪ್ರಕಟಣೆಯನ್ನು ಪ್ರಕಟಿಸುವ ಸಲುವಾಗಿ.
15. ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಪ್ರಕಟಣೆಯನ್ನು ಪ್ರಕಟಿಸುವ ಸಲುವಾಗಿ.
16. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ
17. ಕುಲಸಚಿವರ ಕಛೇರಿಯ ಎಲ್ಲಾ ಅಧೀಕ್ಷಕರುಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ
18. ಕಛೇರಿ ಸೂಚನಾ ಫಲಕಕ್ಕೆ